**<u>ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.</u>**

ಸಿ.ಸಿ.ನಂ. 3810/2022

ಸಿ.ಡಬ್ಲ್ಯೂ -05

ಪಿ.ಡಬ್ಲ್ಯೂ-05

ಸಾಕ್ಷಿದಾರನ ಹೆಸರುಃ- ಮಾಯಮ್ಮಾ

ಗಂಡನ ಹೆಸರು ರಾಜಣ್ಣ

ವಯಸ್ಸು 60 ವರ್ಷ

ಉದ್ಯೋಗ ವ್ಯವಸಾಯ

ವಾಸ ವಡ್ಡರಾಳು

**<u>ಸಾಕ್ಷಿಗೆ ದಿಃ 20.01.2025 ರಂದು ಪ್ರಮಾಣ ವಚನ ಬೋದಿಸಲಾಯಿತು</u>.**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಚಾಸಾ 1 ರಿಂದ 4 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. 2 ವರ್ಷದ ಹಿಂದೆ ಚಾಸಾ 2 ಮತ್ತು 2 ಅವರು ನಡುವೆ ಜಮೀನಿನಲ್ಲಿ ನೀರಿನ ತೊಟ್ಟಿ ಮತ್ತು ಮನೆ ಕಟ್ಟಿದ ವಿಚಾರವಾಗಿ ಜಗಳವಾಗಿರುತ್ತದೆ. ಚಾಸಾ 2 ಅವರು ಕಟ್ಟಿರುವ ಮನೆಯನ್ನು ಪುಟ್ಟಸ್ವಾಮಯ್ಯ ಅವರು ಬೇರೆ ಜನರುನ್ನು ಕರೆಯಿಸಿ ಕೆಡವಿಸಿರುತ್ತಾರೆ. ಗಂಗಣ್ಣ ಅವರು ತೊಟ್ಟಿಯನ್ನು ಸಹ ಕೆಡವಿರುತ್ತಾರೆ. ತಿಪ್ಪಸಂದ್ರದ ಜಗದೀಶ್ ಅವರು ಜೆ.ಸಿ.ಬಿ ಯಿಂದ ಕೆಡವಿರುತ್ತಾರೆ. ನಂತರ ನಾವು ಗಲಾಟೆ ಶಬ್ದ ಕೇಳಿ ಸ್ಥಳಕ್ಕೆ ಬಂದಿದ್ದು ಚಾಸಾ 3 ನನಗೆ ವಿಷಯ ತಿಳಿಸಿದ್ದು ಅವರಿಗೆ ಆರೋಪಿ 2 ಕಲ್ಲಿನಿಂದ ಕಿವಿಗೆ ಹೊಡೆದಿರುತ್ತಾರೆ. ಅವರು ಕೆಳಗೆ ಬಿದ್ದಾಗ ಬಲಗಡೆ ಆರೋಪಿ 2 ತುಳಿದಿರುತ್ತಾರೆ. ನಂತರ ಚಾಸಾ 1 ಅವರಿಗೆ ಆರೋಪಿ 2 ಕಲ್ಲೆನಿಂದ ಬಲಗಾಲು ಮತ್ತು ಎಡಗಡೆ ಭುಜಕ್ಕೆ ಹೊಡೆದಿರುತ್ತಾರೆ. 5-6 ಜನರನ್ನು ಆರೋಪಿ 2 ಕರೆಸಿದ್ದು ಅವರು ಅಲ್ಲಿಂದ ಹೊರಟು ಹೋಗಿರುತ್ತಾರೆ. ನಾನು ನನ್ನ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 29.03.2022 ರಂದು ಮಧ್ಯಾಹ್ನ 12.30 ರ ಸಮಯದಲ್ಲಿ ನಾನು ಜಮೀನಿನ ಬಳಿ ಹೋಗಿ ಕೆಲಸ ಮಾಡುತ್ತಿದ್ದೇ ಎಂದರೆ ಸರಿ. ನನ್ನ ಪಕ್ಕದ ಜಮೀನನ್ನು ಕರಿಯಣ್ಣ ಅವರ ಮಕ್ಕಳಾದ

ಗಂಗಣ್ಣ ಶಿವಲಿಂಗಯ್ಯ ಮತ್ತು ರಾಜಣ್ಣ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಗಂಗಣ್ಣ ಅವರಿಗೆ ಬಂದ ಭಾಗದಲ್ಲಿ 2 ತಿಂಗಳ ಹಿಂದೆ ನೀರಿನ ತೊಟ್ಟಿ ಕಟ್ಟಿದ್ದು ಅದರ ಪಕ್ಕದಲ್ಲಿ ಸ್ವಲ್ಪ ದೂರನ್ನು ರಾಜಣ್ಣ ಹೊಸದಾರಿ 1 ಮನೆಯಲ್ಲಿ ಕಟ್ಟಿದ್ದರು ಎಂದರೆ ಸರಿ. ಜಮೀನಿನ ದಾರಿಯ ವಿಚಾರವಾಗಿ ರಾಜಣ್ಣ, ಗಂಗಣ್ಣ , ಶ್ರೀನಿವಾಸ ಮನೆಯವರಿಗೂ ಮತ್ತು ಆರೋಪಿ 1 ಮತ್ತು 2 ಅವರಿಗೆ ಜಗಳ ಇತ್ತು ಎಂದರೆ ಸರಿ. ಅದೇ ದಿನ ಮಧ್ಯಾಹ್ನ 12.30 ರ ಸಮಯದಲ್ಲಿ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಜೆ.ಸಿ.ಬಿ ಯೊಂದಿಗೆ ರಾಜಣ್ಣ ಅವರ ಜಮೀನು ಪ್ರವೇಶಿಸಿರುತ್ತಾರೆ ಎಂದರೆ ಸರಿ. ಮತ್ತು ಮನೆಯನ್ನು ಏಕಾಏಕಿ ಜೆ.ಸಿ.ಬಿ ಯಿಂದ ನೆಲ ಸಮಾ ಮಾಡಿರುತ್ತಾರೆ ಎಂದರೆ ಸರಿ. ರಾಜಣ್ಣ ಅವರು ಮನೆಯ ಹತ್ತಿರ ಸ್ವಲ್ಪ ದೂರದಲ್ಲಿದ್ದ ಗಂಗಣ್ಣ ಅವರು ನೀರಿನ ತೊಟ್ಟಿಯನ್ನು ಹೊಡೆದು ಹಾಕಿ ನಷ್ಟ ಉಂಟು ಮಾಡಿರುತ್ತಾರೆ ಎಂದರೆ ಸರಿ.

ಚಾಸಾ 1 ಮತ್ತು 2 ಪ್ರಶ್ನೆ ಮಾಡಿದ್ದಕ್ಕೆ ಆರೋಪಿ 1 ರಿಂದ 3 ಚಾಸಾ 1 ಅವರ ಜುಟ್ಟನ್ನು ಹಿಡಿದು ಎಳೆದಾಡಿ ಅವರು ಉಟ್ಟುಕೊಂಡಿದ್ದ ಸೀರೆಯನ್ನು ಎಳೆದಾಡಿ ಅವಮಾನ ಮಾಡಿರುತ್ತಾರೆ ಎಂದರೆಸರಿ. ಆರೋಪಿ 3 ಕಲ್ಲಿನಿಂದ ಚಾಸಾ 1 ಅವರ ಎಡಗಾಲಿನ ಪಾದದ ಗಿನ್ನಿಗೆ ಬಲಕಾಲ ಮಂಡಿಗೆ ಮತ್ತು ಬಲ ಭುಜದ ಬೆನ್ನಿಗೆ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸರಿ. ಆರೋಪಿ 5 ಚಾಸಾ 1 ಅವರಿಗೆ ಕೈಗಳಿಂದ ಮೈಕೈಗೆ ಹೊಡೆದು ನೋವುಂಟು ಮಾಡಿದ್ದು ಆರೋಪಿ 1 ಮತ್ತು2 ಅವರು ಕಲ್ಲಿನಿಂದ ಚಾಸಾ 2 ಅವರು ಎಡ ಮತ್ತು ಬಲ ತೊಡೆಯ ಸಂದಿಗೆ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸರಿ. ಆರೋಪಿ 2 ಕಲ್ಲಿನಿಂದ ರಾಜಣ್ಣ ಅವರು 2 ಕೈಗೆ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸರಿ. ಚಾಸಾ 1 ಮತ್ತು 3 ಜಗಳ ಬಿಡಿಸಲು ಹೋದಾಗ ಅವಾಚ್ಯ ಶಬ್ದಗಳಿಂದ ಬೈದು ಕಲ್ಲಿನಿಂದ ಬಲಕಿವಿಗೆ ಹೊಡೆದು ರಕ್ತ ಗಾಯ ಮಾಡಿ ಚಾಸಾ 3 ಅವರನ್ನು ಕೆಳಗೆ ಕೆಡವಿ ಕಾಲಿನಿಂದ ಹೊಟ್ಟೆಯ ಮೇಲೆ ಬಲ ಸೊಂಟದ ಮೇಲೆ ಬಲಗಾಲಿನ ಮೇಲೆ ತುಳಿದು ನೋವುಂಟು ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿ 6 ಅವರು ಚಾಸಾ 1 ರಿಂದ 3 ಅವರನ್ನು ತೋರಿಸಿ ಇವರು ಜಮೀನಿನಲ್ಲಿ ದಾರಿಯನ್ನು ಬಿಟ್ಟುಕೊಡಲಿಲ್ಲ ಅವರಿಗೆ ಹೊಡೆದು ಕೈಕಾಲು ಮುರಿದು ಹಾಕಿ ಎಂದು ಮಕ್ಕಳಿಗೆ ಕುಮ್ಮಕ್ಕು ಕೊಡುತ್ತಿದ್ದರು ಎಂದರೆ ಸರಿ. ನಂತರ ನಾನು ಚಾಸಾ 4 ಮತ್ತು 6 ಅವರು ಜಗಳ ಬಿಡಿಸಿರುತ್ತೇನೆ ಎಂದರೆ ಸರಿ.

ನಂತರ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಹೇಳಿ ಕಲ್ಲುಗಳನ್ನು ಅಲ್ಲಿಯೇ ಬಿಸಾಕಿ ಜೆ.ಸಿ.ಬಿ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಆರೋಪಿ 1 ಅವರು ಜೊತೆ 10 ರಿಂದ 12 ಜನ ಹುಡುಗರು ಬಂದಿದ್ದು ಅವರು ಯಾರು ಚಾಸಾ 1 ರಿಂದ 3 ಅವರ ಮೇಲೆ ಗಲಾಟೆ ಮಾಡಿರುವುದಿಲ್ಲ ಮನೆಯ ಹತ್ತಿರ ಸ್ವಲ್ಪ ದೂರದಲ್ಲಿ ನಿಂತುಕೊಂಡಿದ್ದರು ಮತ್ತು ಅವರು ಹೆಸರು, ವಿಳಾಸ ನನಗೆ ಗೊತ್ತಿಲ್ಲವೆಂದರೆ ಸರಿ.

ಈ ವಿಚಾರವಾಗಿ ಚಾಸಾ 1 ದೂರನ್ನು ನೀಡಿದ್ದು ನಾನು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಕಲ್ಲುಗಳಿಂದ ಹೊಡೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.